# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ: 22/09/2021 ಹಾಗೂ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 27.10.2021 ರಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, | ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ | 9513322144 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂ.174 | 9480688174 |
| 3 | ಶ್ರೀ ಬಿ.ಎನ್.ಆರ್ ರೆಡ್ಡಿ | ಸದಸ್ಯರು | 9989000017 |
| 4 | ಶ್ರೀಮತಿ ಡಾ॥ ಶಾಂತಿ, | ಸದ್ಯಸರು | 9036047199 |
| 5 | ಶ್ರೀ ರಾಮಚಂದ್ರ | ಸದ್ಯಸರು | 9845056649 |
| 6 | ಶ್ರೀಮತಿ ವಿಜಯ್‌ಲಕ್ಷ್ಮೀ ಆನಂದ | ಸದ್ಯಸರು | 9980713619 |
| 7 | ಶ್ರೀ ನಾಗರಾಜ.ವಿ | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಹೆಚ್.ಎಸ್.ಆರ್ ಬಡಾವಣೆ | 9845444037 |
| 8 | ಶ್ರೀ ರಾಘವೇಂದ್ರ.ಆರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್-4 (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಕೋರಮಂಗಲ | 9591988970 |
| 9 | ಶ್ರೀ ರಾಮಚಂದ್ರ | ಸಹಾಯಕ ಕಂದಾಯ ಅಧಿಕಾರಿ, ಹೆಚ್.ಎಸ್.ಆರ್ ಉಪವಿಭಾಗ | 9480685984 |
| 10 | ಶ್ರೀ ವಿನೋದ್.ಜಿ | ಹಿ.ಆ.ಪ ವಾ.ಸಂ: 174 | 9844629911 |
| 11 | ಶ್ರೀ ಹರೀಶ್.ಹೆಚ್.ಆರ್ | ಅರಣ್ಯ ವಲಯ ಅಧಿಕಾರಿ | 9742612471 |
| 12 | ಶ್ರೀಮತಿ ಸತ್ಯವಾಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ: 174 | 8971434331 |
| 13 | ಶ್ರೀ ಮಹೇಶ್ | ಬೀದಿ ದೀಪ ನಿರ್ವಾಹಕರು | 9986041663 |
| 14 | ಶ್ರೀ ಹೆಚ್.ನರಸಪ್ಪ | ತೋಟಗಾರಿಕೆ ಸಹಾಯಕರು | 8105663239 |

(ಪು.ತಿ.ನೋ)

Scanned with

- ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿಲಾಗಿದ್ದು, ಶ್ರೀ ರಮೇಶ್ ಸಹಾಯಕ ಅಭಿಯಂತರರು, ಬಿಬಿಎಂಪಿ ವಿದ್ಯುತ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಆಗಲೀ ಅಥವಾ ಸಹಾಯಕ ಅಭಿಯಂತರರು, ಬೆಸ್ಕಾಂ, ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷರು ಬೊಮ್ಮನಹಳ್ಳಿ ವಲಯ, ಪೋಲಿಸ್ ಇಲಾಖೆ ಹೆಚ್.ಎಸ್.ಆರ್ ಮತ್ತು ಪೋಲಿಸ್ ಸಂಚಾರ ಇಲಾಖೆಯ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿದ್ದಕ್ಕೆ ಎಲ್ಲಾ ಸದಸ್ಯರು ಆಕ್ಷೇಪಿಸಿ ಕ್ರಮ ಜರುಗಿಸುವಂತೆ ಕಾರಣ ಕೇಳಿ ನೋಟಿಸ್ ನೀಡಲು ಕೋರಿರುತ್ತಾರೆ. ಅದಕ್ಕೆ ಮುಂದಿನ ಸಭೆಗೆ ಗೈರುಹಾಜರಾಗದೆ ಕ್ರಮ ವಹಿಸುವುದೆಂದು ಸದಸ್ಯರುಗಳಿಗೆ ನೋಡಲ್ ಅಧಿಕಾರಿಗಳು ತಿಳಿಸಿ ಸಭೆಯನ್ನು ಮುಂದುವರೆಸಿದರು.

- <u>ಘನಾತಾಜ್ಯ ನಿರ್ವಹಣೆ:-</u>

1. ಹಿಂದಿನ ಸಭೆಯ ದಿನಾಂಕ: 04.09.2021 ಮತ್ತು 08.10.2021 ರಂದು ಸದ್ಯಸರು ರವರು ಪ್ರಸ್ತಾಪಿಸಿರುವಂತೆ ಹಾಗೂ ಇಂದಿನ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯ 14ನೇ ಅಡ್ಡ ರಸ್ತೆ, 19ನೇ ಅಡ್ಡ ರಸ್ತೆ, 27ನೇ ಮುಖ್ಯ ರಸ್ತೆ, ಮೆಕ್ಡೊನಾಲ್ಡ್ಸ್ ಸೆಕ್ಟರ್-7, ಬಿ.ಡಿ.ಎ ಕಾಂಪ್ಲೆಕ್ಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಹೆಚ್ಚಾಗಿರುವ ತಳ್ಳುವ ಗಾಡಿಯನ್ನು ತೆರವುಗೊಳಿಸಲು ಶ್ರೀ ಬಿ.ಎನ್.ಆರ್ ರೆಡ್ಡಿ, ಇತರೆ ಸದ್ಯಸರು, ಸ್ಥಳೀಯ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ರವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಿನೋದ್.ಜಿ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ದಿನಾಂಕ: 06.11.2021 ಶನಿವಾರ ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೋಲೀಸ್ ಇಲಾಖೆ ರವರೊಂದಿಗೆ ಜಂಟಿಯಾಗಿ ತಪಾಸಣೆ ಮಾಡಿ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.
2. ಹೆಚ್.ಎಸ್.ಆರ್ ಬಡಾವಣೆಯ ವ್ಯಾಪ್ತಿಯ 5ನೇ ಮುಖ್ಯ ರಸ್ತೆಯಲ್ಲಿ ವಾರದಲ್ಲಿ 4 ದಿನ ಪೌರಕಾರ್ಮಿಕರು ಸ್ವಚ್ಛತೆ ಮಾಡಲಾಗುತ್ತಿದ್ದು ಇನ್ನೊಳಿದ ದಿನದಲ್ಲಿ ರಸ್ತೆ ಅಗಲೀಕರಣ, ಸರ್ವಿಸ್ ರಸ್ತೆಯಲ್ಲಿ ಸ್ವಚ್ಛತೆ ಮಾಡಲಾಗುತ್ತಿದೆ ಇದರ ಸ್ವಚ್ಛತೆಯನ್ನು Mechanical Sweap ವಾಹನದಿಂದ ಮಾಡಿಸಲು ಹಾಗೂ ಪೌರಕಾರ್ಮಿಕರನ್ನು ಅಡ್ಡ ರಸ್ತೆ ಮತ್ತು ಮುಖ್ಯ ರಸ್ತೆಯಲ್ಲಿ ಮಾತ್ರ ಕೆಲಸ ನಿರ್ವಹಿಸಲು ಸಭೆಯಲ್ಲಿ ಶ್ರೀ ಬಿ.ಎನ್.ಆರ್ ರೆಡ್ಡಿ, ರವರು ಪ್ರಸ್ತಾಪಿಸಿದರು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಿನೋದ್.ಜಿ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಶ್ರೀಮತಿ ಸತ್ಯವಾಣಿ ಕಿ.ಆ.ಪ ರವರು ಈ ವಾರ್ಡ್‌ನಲ್ಲಿ ಪೌರಕಾರ್ಮಿಕರ ಕೊರತೆ ಇದ್ದು ಪೌರಕಾರ್ಮಿಕರನ್ನು ನಿಯೋಜನೆ ಮಾಡಲು ಕಡತವನ್ನು ಕಳುಹಿಸಲಾಗಿರುತ್ತದೆ ಎಂದು ಹಾಗೂ ಸರ್ವಿಸ್ ರಸ್ತೆಯಲ್ಲಿ Mechanical Sweap ವಾಹನದಿಂದ ಸ್ವಚ್ಛ ಮಾಡಲು ಸಾಧ್ಯವಾಗದಿರುವುದರಿಂದ ಪರ್ಯಾಯ ದಿನಗಳಲ್ಲಿ ಪೌರಕಾರ್ಮಿಕರನ್ನು ಸ್ವಚ್ಛ ಮಾಡಲು ನಿಯೋಜನೆ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.
3. ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯ ಇಬ್ಬಲೂರು ಗ್ರಾಮದಲ್ಲಿ ಸುಮಾರು ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ಕೆಲಸ ಮುಗಿದ ನಂತರ ಹಾಜರಾತಿಯನ್ನು Biometric machine ಅಲ್ಲಿ Thumb impression ಮಾಡಲು ಇಬ್ಬಲೂರು ಗ್ರಾಮದಿಂದ ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಕಛೇರಿ Point ವರಿಗೂ ಬರಬೇಕಾಗಿರುವುದರಿಂದ ಇಬ್ಬಲೂರು ಗ್ರಾಮದ ಇಂದಿರಾ ಕ್ಯಾಂಟಿನ್ ಹತ್ತಿರ ಒಂದು Point ಸ್ಥಾಪಿಸಿ ಹೊಸದಾಗಿ Biometric machine ವ್ಯವಸ್ಥೆ ಮಾಡಿಸಲು ಶ್ರೀಮತಿ ಸತ್ಯವಾಣಿ ಕಿ.ಆ.ಪ ರವರು ಅಧ್ಯಕ್ಷಕರು/ನೋಡಲ್ ಅಧಿಕಾರಿಗಳ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಸಭೆಯಲೇ ಅಧಿಕ್ಷಕ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರೊಂದಿಗೆ ದೂರವಾಣಿ ಮುಖಾಂತರ ಮಾತನಾಡಿ ಶೀಘ್ರದಲೇ ಹೊಸದಾಗಿ Biometric machine ವ್ಯವಸ್ತೆ ಮಾಡುವಂತೆ ಅಧ್ಯಕ್ಷಕರು/ನೋಡಲ್ ಅಧಿಕಾರಿ ರವರು ಸೂಚಿಸಿದರು.

<u>ಅರಣ್ಯ ಇಲಾಖೆ :-</u>

1. ಹಿಂದಿನ ಸಭೆಯ ದಿನಾಂಕ: 08.10.2021 ರಂದು ಶ್ರೀಮತಿ ಡಾ|| ಶಾಂತಿ, ಸದ್ಯಸರು ರವರು ಪ್ರಸ್ತಾಪಿಸಿರುವಂತೆ ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯ 9ನೇ ಮುಖ್ಯ ರಸ್ತೆ, ಸೆಕ್ಟರ್ 7 ಮತ್ತು ಸುತ್ತಮುತ್ತಲ್ಲಿನ ಪ್ರದೇಶಗಳಲ್ಲಿ ಅನಧಿಕೃತವಾಗಿ ಮರಗಳನ್ನು ಕತ್ತರಿಸುತ್ತಿರುವವರಿಗೆ ಪೋಲಿಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಅರಣ್ಯ ವಲಯ ಅಧಿಕಾರಿ ಸಭೆಗೆ ತಿಳಿಸಿದರು.
2. ಹಿಂದಿನ ಸಭೆಯ ದಿನಾಂಕ: 08.10.2021 ರಂದು ಶ್ರೀ ಬಿ.ಎನ್.ಆರ್ ರೆಡ್ಡಿ, ಶ್ರೀ ಚಂದ್ರಶೇಖರ್ ಮತ್ತು ಇತರೆ ಸದ್ಯಸರು ರವರು ಪ್ರಸ್ತಾಪಿಸಿರುವಂತೆ ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯಲ್ಲಿ 7 ಅಡಿ ಎತ್ತರಕ್ಕಿಂತ ಕಡಿಮೆ ಇರುವ ಕೊಂಬೆಗಳನ್ನು ಸರ್ವೆ ಮಾಡಲಾಗುತ್ತಿದೆ ಎಂದು ಸಭೆಯಲ್ಲಿ ಹಾಜರಿದ್ದ ಅರಣ್ಯ ವಲಯ ಅಧಿಕಾರಿ ಸಭೆಗೆ ತಿಳಿಸಿದರು.

(ಮು.ತಿ.ನೋ)

Scanned with

3. ಹೆಸ್.ಎಸ್.ಆರ್ ಬಡಾವಣೆ ವ್ಯಾಪ್ತಿಯ ಪ್ರದೇಶದಲ್ಲಿ ಮಳೆಯಿಂದಾಗಿ ಹಾಗೂ ಬೆಸ್ಕಾಂ ಇಲಾಖೆಯಿಂದ ಮರ ಕೊಂಬೆಗಳನ್ನು ಕತ್ತರಿಸಲಾಗಿದ್ದು ಈ ಕೊಂಬೆಗಳನ್ನು ಅನ್‌ಲೋಡ್ ಮಾಡುವುದಕ್ಕೆ ಪ್ರತ್ಯೇಕ ಜಾಗವನ್ನು ಗುರುತ್ತಿಸಲು ಶ್ರೀ ಬಿ.ಎನ್.ಆರ್ ರೆಡ್ಡಿ, ಶ್ರೀಮತಿ ಡಾ|| ಶಾಂತಿ, ಮತ್ತು ಇತರೆ ಸದ್ಯಸರು ಸಭೆಯಲ್ಲಿ ತಿಳಿಸಿದು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅರಣ್ಯ ವಲಯ ಅಧಿಕಾರಿ ಹೊಸಪಾಳ್ಯ ಉದ್ಯಾನವನದಲ್ಲಿ ಅನ್‌ಲೋಡ್ ಮಾಡಬಹುದೆಂದು ಸಭೆಗೆ ತಿಳಿಸಿದರು.

**ಕಂದಾಯ ಇಲಾಖೆ :-**

1. ಹಿಂದಿನ ಸಭೆಯ ದಿನಾಂಕ: 08.10.2021 ರಂದು ಶ್ರೀ ಬಿ.ಎನ್.ಆರ್ ರೆಡ್ಡಿ, ಶ್ರೀ ಚಂದ್ರಶೇಖರ್ ಮತ್ತು ಇತರೆ ಸದ್ಯಸರು ರವರು ಪ್ರಸ್ತಾಪಿಸಿರುವಂತೆ ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳಲ್ಲಿ ಶೆಡ್‌ಗಳನ್ನು ಹಾಕಿಕೊಂಡಿದ್ದು, ಖಾಲಿ ನಿವೇಶನದ ಮಾಲೀಕರಿಗೆ ಕಂದಾಯ ಪಾವತಿಸುವಂತೆ ಸೂಚಿಸಲು ಹಾಗೂ ಖಾಲಿ ನಿವೇಶನದ ಪಟ್ಟಿಗಳನ್ನು ಮಾಡುವಂತೆ ಹಾಗೂ ಕಾರ್ನರ್ ಸೈಟ್‌ಗಳ ವಾಣಿಜ್ಯ ಪ್ರದೇಶಗಳನ್ನು ಸರ್ವೆ ಮಾಡಲು ಚರ್ಚಿಸಲಾಗಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿ ರವರು ಖಾಲಿ ನಿವೇಶನಗಳ ಪಟ್ಟಿ ಮಾಡಲಾಗುತ್ತಿದೆ ಹಾಗೂ ಮುಂದಿನ ಸಭೆಯಲ್ಲಿ ಹಾಜರು ಪಡಿಸಲಾಗುವುದೆಂದು ಸಭೆಗೆ ತಿಳಿಸಿದರು.

**ಕಾಮಗಾರಿ ಇಲಾಖೆ :-**

1. ಹೆಚ್.ಎಸ್.ಆರ್ ವಾರ್ಡ್ ವ್ಯಾಪ್ತಿಯ ಪ್ರದೇಶದಲ್ಲಿ ಕಟ್ಟಡ ನಿರ್ಮಿಸುತ್ತಿರುವವರು ಮಣ್ಣು, ಸಿಮೆಂಟ್, ಕಲು ಮತ್ತು ಇತ್ಯಾದಿ ಅವಶೇಷಗಳು ಪಾದಚಾರಿ ಮಾರ್ಗದಲ್ಲಿ ಮತ್ತು ರಸ್ತೆಯಲ್ಲಿ ಹಾಕಿದ್ದು ಇದರಿಂದ ಸಾರ್ವಜನಿಕರು, ಸ್ಥಳೀಯರು ಮತ್ತು ವಾಹನ ಸವಾರರು ಓಡಾಡಲು ತೊಂದರಿಯಾಗುತ್ತಿದೆ ಎಂದು ಶ್ರೀ ಬಿ.ಎನ್.ಆರ್ ರೆಡ್ಡಿ, ಶ್ರೀಮತಿ ಡಾ|| ಶಾಂತಿ, ಮತ್ತು ಇತರೆ ಸದ್ಯಸರು ಸಭೆಯಲ್ಲಿ ತಿಳಿಸಿದು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕಾರ್ಯದರ್ಶಿ/ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ಕಟ್ಟಡ ನಿರ್ಮಿಸುತ್ತಿರುವವರನ್ನು ಸ್ಥಳ ಪರಿಶೀಲಿಸಿ ಮಾಲೀಕರಿಗೆ ಎಚ್ಚರಿಕೆ ನೀಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

**ಬಿ.ಡಬ್ಲ್ಯೂ.ಎಸ್.ಎಸ್.ಬಿ:-**

1. ಹೆಚ್.ಎಸ್.ಆರ್ ವಾರ್ಡ್ ವ್ಯಾಪ್ತಿಯ ಇಬ್ಬಲೂರು ಗ್ರಾಮದಲ್ಲಿ ಸ್ಯಾನಿಟರಿ ಉಕ್ಕಿ ಹರಿಯುತ್ತಿದೆ ಎಂದು ಶ್ರೀ ರಾಮಚಂದ್ರ, ಸದ್ಯಸರು ರವರು ಸಭೆಗೆ ತಿಳಿಸಿದು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ನಾಗರಾಜ.ಎ, ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಹೆಚ್.ಎಸ್.ಆರ್ ಬಡಾವಣೆ ರವರು ಈ ಪ್ರದೇಶ ಕೋರಮಂಗಲ ಬರುವುದರಿಂದ ಸಭೆಗೆ ಶ್ರೀ ರಾಘವೇಂದ್ರ.ಆರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್-4 (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಕೋರಮಂಗಲ ರವರು ಸಭೆಯಲ್ಲಿ ಹಾಜರಿದ್ದು ಮತ್ತು ಸ್ಥಳ ಪರಿಶೀಲಿಸಿ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಪು.ತಿ.ನೋ)

Scanned with

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with